ಶ್ರೀ ಹೆಚ್.ಡಿ. ರೇವಣ್ಣ : ಒಂದು ಎರಡು ನಿಮಿಷ ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತಂದು ಬಿಡುತ್ತೇನೆ.

ಅಧ್ಯಕ್ಷರು : ಹೇಳಿದರಲ್ಲಾ

ಶ್ರೀ ಹೆಚ್.ಡಿ. ರೇವಣ್ಣ :– ಕಟ್ಟಡ ಕಟ್ಟಿರುವುದು ಎಲ್ಲಾ ನಿಜ. ಆದರೆ computer desk ಗಳನ್ನೆಲ್ಲಾ ಕೆಲವು ದಾನಿಗಳು ಕೊಟ್ಟಿದ್ದಾರೆ. ಇವತ್ತಿನವರೆಗೂ ಸರ್ಕಾರದಿಂದ ಒಂದು desk ಕೊಟ್ಟಿಲ್ಲ. ಒಂದೂವರೆ ವರ್ಷ ಆಯಿತು. ಕಟ್ಟಡ ಕಟ್ಟಿ. ಅದರ ಒಳಗೆ ಹೋಗುವುದಕ್ಕೆ ಆಗಿರಲಿಲ್ಲ.

ಅಲ್ಲಿ ಮೇಲುಗಡೆ ಒಳಗಡೆ ಕಾಡು ಬೆಳೆದ ಹಾಗೆ ಬೆಳೆದಿದೆ. ಅಲ್ಲಿ ಹಾವುಗಳು ಸೇರಿಕೊಂಡಿದೆ. ಕೂಡಲೆ ಅಲ್ಲಿ ಸ್ವಚ್ಛ ಮಾಡಬೇಕು. ಇದನ್ನು ನಾನು ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತರುತ್ತಿದ್ದೇನೆ. ಇಡೀ ರಾಜ್ಯದಲ್ಲಿ ರಿಸಲ್ಟ್ ನಂ. 1 ಇದೆ. ಆ ಕಾಲೇಜಿನ ಕಟ್ಟಡದೊಳಗಡೆ ಕಾಡು ಬೆಳದಿರುವುದರಿಂದ ಅಲ್ಲಿ ಹಾವುಗಳು ಸೇರಿಕೊಂಡು ಕಟ್ಟಡವು ದುಸ್ಥಿತಿಯಾಗಿದೆ. ಇದು ಆಗಬಾರದು. ಕಟ್ಟಡವು ಒಳ್ಳೆಯ ಸುಂದರವಾಗಿದೆ. ಕೂಡಲೆ ಆಲ್ಲಿ ಗಿಡಗಂಟೆಗಳನ್ನು ಕೀಳಿಸುವಂತಹ ಕಾರ್ಯವನ್ನು ಮಾಡಬೇಕು.

ಅಧ್ಯಕ್ಷರು :– ಆಯಿತು. ಈಗ ತೊಗರಿ ಬೆಳೆಗೆ ಸಂಬಂದಪಟ್ಟಂತೆ ತೆಗೆದುಕೊಳ್ಳೋಣ. ಮಾನ್ಯ ಉಮೇಶ್ ಕತ್ತಿಯವರೆ ತಾವು ಉತ್ತರವನ್ನು ಕೊಡಿ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :– ಮಾನ್ಯ ಅಧ್ಯಕ್ಷರೆ, ತೊಗರಿ ಬೆಳೆಗಾರರ ಬಗ್ಗೆ ಮಾನ್ಯ ಸಚಿವರು ಉತ್ತರವನ್ನು ಕೊಡಬೇಕಾಗಿದೆ.

ಅಧ್ಯಕ್ಷರು :– ತಾವು ಹೇಳಿದ್ದೀರಿ, ಮಾನ್ಯ ಸಚಿವರು ಉತ್ತರವನ್ನು ಕೊಡಲಿ.

ಶ್ರೀ ಬಂಡೆಪ್ಪ ಖಾಶಂಪೂರ್ :– ಮಾನ್ಯ ಅಧ್ಯಕ್ಷರೆ, ಇದು ಶೂನ್ಯವೇಳೆಯಲ್ಲಿ ಬಂದಿದೆ.

ಅಧ್ಯಕ್ಷರು :– ನಿನ್ನೆ ತಾವು ಈ ಬಗ್ಗೆ ಮಾತನಾಡಿದ್ದೀರಿ. ಮತ್ತೆ ಮತ್ತೆ ತಾವು ಏನು ಮಾತನಾಡುತ್ತೀರಿ?ಈಗ ಮಾನ್ಯ ಸಚಿವರು ಉತ್ತರವನ್ನು ಹೇಳುತ್ತಾರೆ.

ಶ್ರೀ ಹೆಚ್.ಡಿ. ರೇವಣ್ಣ :– ಮಾನ್ಯ ಸಚಿವರು ಉತ್ತರವನ್ನು ಹೇಳವುದಕ್ಕಿಂತ ಮುಂಚೆ ಮಾನ್ಯ ಸದಸ್ಯರಾದ ಶ್ರೀ ಬಂಡೆಪ್ಪ ಖಾಶಂಪೂರ್‌ರವರ ಹೇಳಿದ ಮೇಲೆ ನಂತರ ಉತ್ತರವನ್ನು ಹೇಳಲಿ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :– ಮಾನ್ಯ ಅಧ್ಯಕ್ಷರೆ, ಇದು ಅವರದಲ್ಲ, ನಾನು ಗಮನ ಸೆಳೆಯುವ ಸೂಚನೆಯನ್ನು ಕೇಳಿದ್ದೇನೆ.

(ಗೊಂದಲ)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :– ಮೊದಲು ಮಾನ್ಯ ಸಚಿವರು ಉತ್ತರವನ್ನು ಕೊಡಲಿ.

ಶ್ರೀ ಹೆಚ್.ಡಿ. ರೇವಣ್ಣ :– ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಬಂಡೆಪ್ಪ ಖಾಶೆಂಪೂರ್‌ರವರು ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ.

ಅಧ್ಯಕ್ಷರು :– ನಿನ್ನೆ ದಿನ ಬಂಡೆಪ್ಪ ಖಾಶಂಪೂರ್‌ರವರು ಈ ಬಗ್ಗೆ ಚರ್ಚೆಯನ್ನು ಮಾಡಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ :– ಇದು ಹೊಸ ವಿಷಯವಾಗಿದೆ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :– ಮೊದಲು ನಾನು ಗಮನ ಸೆಳೆಯುವ ಸೂಚನೆಯನ್ನು ಕೇಳಿರುವ ಬಗ್ಗೆ ಮಾನ್ಯ ಕೃಷಿ ಸಚಿವರು ಉತ್ತರವನ್ನು ಕೊಡಲಿ.

ಅಧ್ಯಕ್ಷರು :– ನಿನ್ನೆ ಈ ಬಗ್ಗೆ ಮಾತನಾಡಿ ಆಗಿದೆ.

ಡಾ॥ ಶರಣಪ್ರಕಾಶ ರುದ್ರಪ್ಪ ಪಾಟೀಲ್ :– ಇವರು ಆಮೇಲೆ ಮಾತನಾಡಲಿ. ಮೊದಲು ಸಚಿವರು ಉತ್ತರವನ್ನು ಕೊಡಲಿ. ಅವರು ಉತ್ತರ ಕೊಟ್ಟ ನಂತರ ಇವರು ಕೇಳಲಿ.

ಶ್ರೀ ಎಸ್. ಸುರೇಶ್ ಕುಮಾರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :– ನಿನ್ನೆ ದಿನ ಈ ವಿಷಯದ ಬಗ್ಗೆ ಸಾಕಷ್ಟು ಪ್ರಸ್ತಾಪವಾಗಿದೆ. ಅಲ್ಲಿ ಸಮಸ್ಯೆ ಏನಿದೆ ಎಂದು ಗೊತ್ತಿದೆ. ಮಾನ್ಯ ಕೃಷಿ ಸಚಿವರು ಉತ್ತರವನ್ನು ಕೊಡಲಿ. ಅದು ಆದ ನಂತರ ನೋಡೋಣ.

6. ವಿಷಯ : ತೊಗರಿ ಬೆಳೆಗೆ ಬೆಂಬಲ ಬೆಲೆ ನೀಡುವ ಬಗ್ಗೆ ಸಚಿವರಿಂದ ಉತ್ತರ

ಶ್ರೀ ಉಮೇಶ್ ವಿ. ಕತ್ತಿ (ಮಾನ್ಯ ಕೃಷಿ ಮತ್ತು ಆಹಾರ ಸಂಸ್ಕರಣೆ ಸಚಿವರು) :– ಮಾನ್ಯ ಅಧ್ಯಕ್ಷರೆ, ನಿನ್ನೆ ದಿನ ತೊಗರಿ ಬೆಂಬಲ ಬೆಲೆಯ ಬಗ್ಗೆ ಸದನದಲ್ಲಿ ಸಾಕಷ್ಟು ಚರ್ಚೆಯಾಗಿದೆ. ಈ ಸಂಬಂಧ ಎಲ್ಲರೂ ಬಾವಿಗೆ ಬಂದು ಮುಷ್ಕರ ಮಾಡುವಂತಹ ಮಟ್ಟಕ್ಕೆ ಹೋಗುವಂತಹ ಸಂದರ್ಭದಲ್ಲಿ ಈ ಬಗ್ಗೆ ಸರ್ಕಾರವು ಮರುಚಿಂತನೆಯನ್ನು ಮಾಡಿ ಇಡೀ ದೇಶದಲ್ಲಿ ಅತ್ಯುತ್ತಮ ತೊಗರಿ ಬೆಳೆಯನ್ನು ಬೆಳೆಯುವಂತಹ ರಾಜ್ಯ ಯಾವುದು ಎಂದರೆ ಕರ್ನಾಟಕ ರಾಜ್ಯ. ಈ ತೊಗರಿಬೆಳೆ ಇವತ್ತು 6 ಲಕ್ಷ ಹೆಕ್ಟರ್‌ನಲ್ಲಿ 20 ಲಕ್ಷ ಕ್ವಿಂಟಾಲ್ ತೊಗರಿಯನ್ನು ಬೆಳೆಯುವಂತಹ ಸಂದರ್ಭದಲ್ಲಿ ಒಂದು ಕಡೆ ಬರಗಾಲದ